

ಹ್ಯೂಮನ್ ಬಾಡಿಯಲ್ಲಿ ಬ್ರೈನಿನಷ್ಟು ಸೂಕ್ಷ್ಮವಾದ ಮತ್ತು ಸಂಕೀರ್ಣವಾದ ಪಾರ್ಟ್ ಮತ್ತೊಂದಿಲ್ಲ. ಮಾನವನ ಮೆದುಳಿನಲ್ಲಿ ಸರಿಸುಮಾರು ಎಂಬತ್ತಾರು ಶತಕೋಟಿ ನ್ಯೂರಾನ್ ಗಳಿವೆಯಂತೆ. ಮೆದುಳಿನಲ್ಲಿರುವ ನರನಾರಿನ ಉದ್ದ ಸರಿಸುಮಾರು ಐದು ಲಕ್ಷ ಕಿಲೋಮೀಟರ್‌ಗಳಂತೆ. ಅಂದರೆ ಭೂಮಿ ಮತ್ತು ಚಂದ್ರನ ನಡುವಿನ ಅಂತರಕ್ಕಿಂತಲೂ ಹೆಚ್ಚು. ಈ ವಿಷಯಗಳನ್ನು ಊಹಿಸಿಕೊಳ್ಳಲಿಕ್ಕಾದರೂ ಸಾಮಾನ್ಯ ಜನರಿಗೆ ಆಗುತ್ತದ? ಆದರೆ ವೈಜ್ಞಾನಿಕ ಮತ್ತು ವೈದ್ಯಕೀಯ ಸಂಶೋಧನೆಗಳು ಇವುಗಳನ್ನೆಲ್ಲ ಸತ್ಯವೆಂದು ತೋರಿಸಿಕೊಟ್ಟಿವೆ. ಹೀಗೆ ಮೆದುಳಿನ ನರಮಂಡಲಕ್ಕೆ ರಕ್ತ ಹರಿಯುವುದು ನಿಂತು ಪ್ರಜ್ಞೆ ಕಳೆದುಕೊಂಡ ವರ್ಷದ ಮೇಲೆ ಕೂಡಾ ಪ್ರಜ್ಞೆ ಮರುಕಳಿಸಿದ ಉದಾಹರಣೆಗಳು ಜಗತ್ತಿನಲ್ಲಿ ಸಿಗುತ್ತವೆ. ಹೋದ ವರ್ಷ ಇದೇ ಆಸ್ಪತ್ರೆಯಲ್ಲಿ ಇಂಥದೇ ಪ್ರಕರಣದಲ್ಲಿ ನಲವತ್ತು ದಿನಕ್ಕೆ ಪ್ರಜ್ಞೆ ಮರುಕಳಿಸಿ ಆ ವ್ಯಕ್ತಿ ಈಗ ಗಟ್ಟಿಮುಟ್ಟಾಗಿ ಓಡಾಡಿಕೊಂಡಿದ್ದಾನೆ. ಒಟ್ಟಿನಲ್ಲಿ ಅದೃಷ್ಟ ಗಟ್ಟಿಯಾಗಿರಬೇಕು. ಈ ಬಗ್ಗೆ ಎಲ್ಲಾ ಡೀಟೈಲ್ಸ್ ಅನ್ನೂ ಡಾಕ್ಟರ್ ವಿಕ್ರಮ್ ಸರ್ ಅವರಿಗೆ ಹೇಳಿದ್ದೇನೆ. ನೀವು ಒಂದೆರಡು ವಾರ ಕಾದು ನೋಡಬಹುದು.' ಡಾಕ್ಟರ್ ವಿಷ್ಣುಬ್ರಹ್ಮರ ಮಾತುಗಳು ಸ್ಪಷ್ಟವಾಗಿ ನನ್ನ ಮೆದುಳಿಗೆ ಹೋಗಿದ್ದರೂ ಅವುಗಳನ್ನೆಲ್ಲ ಅರಗಿಸಿಕೊಳ್ಳಲು ಮನಸ್ಸು ತಿಣುಕಾಡುತ್ತಿತ್ತು.

ಒಂದು, ಎರಡು ಮೂರು ನಾಲ್ಕು ಐದು ಆರು...! ದಿನಗಳು ಉರುಳುತ್ತಿವೆ; ಮತ್ತೊಮ್ಮೆ ಎಂಆರ್‌ಐ ಸ್ಕ್ಯಾನ್, ಡಾಕ್ಟರುಗಳ ಮತ್ತದೆ ಭರವಸೆಯ ಮಾತುಗಳು. ಗೆಳೆಯರು, ಬಂಧುಗಳು, ನೆರೆಹೊರೆಯವರು ಬಂದು ಹೋಗುತ್ತಿದ್ದಾರೆ. ಸಾಂತ್ವನಗಳ ಸುರಿಮಳೆಯಾಗುತ್ತಿದೆ. ಧೈರ್ಯ ತುಂಬುವ ಮಾತುಗಳು ಕಿವಿಯನ್ನು ಅಪ್ಪಳಿಸುತ್ತಿವೆ. ಏಳು ಎಂಟು ಒಂಬತ್ತು ಹತ್ತು ಹನ್ನೊಂದು ಹನ್ನೆರಡು ಹದಿಮೂರು ಹದಿನಾಲ್ಕು ಹದಿನೈದು ಹದಿನಾರು ಹದಿನೇಳು ಹದಿನೆಂಟು ಹತ್ತೊಂಬತ್ತು ಇಪ್ಪತ್ತು...! ಆಸ್ಪತ್ರೆಯ ಅಟೆಂಡರ್ಸ್ ಲಾಂಜ್‌ನಲ್ಲಿ ಹಳೆ ಮುಖಗಳು ಮರೆಯಾಗಿ ಹೊಸ ಮುಖಗಳು ಕಾಣುತ್ತವೆ. ಹೊಸ ಮುಖಗಳು ಹಳೆಯದಾಗುತ್ತಿವೆ. ಇಪ್ಪತ್ತೊಂದು...! ಹಿತವಾದ ಕೈ ಭುಜದ ಮೇಲೆ ಇಟ್ಟಂತಾಗಿ ಅರೆ, ಚಂದ್ರಮಳದಿರಬಹುದೆ, ಐಸಿಯು ವಿನಿಂದ ನನ್ನನ್ನು ಹುಡುಕಿಕೊಂಡು ಅಟೆಂಡರ್ಸ್ ಲಾಂಜ್‌ಗೆ ಬಂದು ಬಿಟ್ಟಳೆ... ಓ ಮೈ ಗಾಡ್. ಧಿಗ್ಗನೆ ಎಂದು ನಿಂತವನ ಕಣ್ಣೆದುರು ವೆನ್ನೆಲ ನಿಂತಿದ್ದ. 'ಏನಪ್ಪಾ ಇಂಥ ಸೀರಿಯಸ್ ವಿಷಯವನ್ನು ತಿಳಿಸದಿದ್ದರೆ ಹೇಗೆ. ನಿನ್ನೆ ಬೆಳಿಗ್ಗೆನೆ ಕ್ರಾಂತಿ ತಿಳಿಸಿದ್ದ. ಡೈರೆಕ್ಟರ್ ಇಮ್ಮಿಡಿಯಟ್ಟಾಗಿ ಒಂದು ವಾರ ಎಮರ್ಜೆನ್ಸಿ ಲೀವ್ ಸ್ಯಾಂಕ್ಷನ್ ಮಾಡಿ ಕಳಿಸಿದರು. ನಿನ್ನೆ ಮುಂಬಯಿಗೆ ಹೋಗಿ ಇಂದು ಮಧ್ಯಾಹ್ನ ಹೊರಟು ಬಂದೆ. ಮುಂಬಯಿಯ ಲೀಲಾವತಿ ಹಾಸ್ಪಿಟಲ್ ಅಂಡ್ ರಿಸರ್ಚ್ ಸೆಂಟರ್‌ನಲ್ಲಿ ನನ್ನ ಬ್ಯಾಚ್ಮೇಟ್ ಅಕ್ಕ ಸೀನಿಯರ್ ನ್ಯೂರೊ ಸರ್ಜನ್. ಅಮ್ಮನ ಎಂಆರ್‌ಐ ಸ್ಕ್ಯಾನ್ ನೋಡಿದ್ರು. ಮಿಡ್ಲ್ ಬ್ರೈನ್ ಕಂಪ್ಲೀಟ್ ಡೆಡ್ ಆಗಿದೆಯಂತೆ. ಆಕ್ಯುಯಲ್ ಕಾರ್ಡಿಯಾಕ್ ಅರೆಸ್ಟ್ ಆಗಿರೋದು ಒಂಬತ್ತು ನಿಮಿಷವಂತೆ. ಇಲ್ಲಿಯವರು ಸರಿಯಾಗಿ ಡಯಾಗ್ನೈಸ್ ಮಾಡಿಲ್ಲ. ಮಾಡಿದ್ರೂ ನಿಮಗೆ ನಿಜ ಹೇಳಿಲ್ಲ...' ಹೇಳ ಹೇಳುತ್ತಲೇ ಅವನ ಗಂಟಲು ಕಟ್ಟಿತ್ತು ಕಣ್ಣೀಗಳು ತುಂಬಿಕೊಂಡಿದ್ದವು.

ನಾನು ಐಸಿಯುಗೆ ಓಡಿದ್ದೆ. ಒಂದನೇ ನಂಬರ್ ಬೆಡ್ ಮುಂದೆ ನಿಂತಿದ್ದೆ. ಚಂದ್ರಮ ಪ್ರಶಾಂತವಾಗಿ ಮಗಿದ್ದಳು.

'ಎದ್ದೇಳು ಚಂದ್ರಮ. ಈ ಆಸ್ಪತ್ರೆಯಿಂದ ತಪ್ಪಿಸಿಕೊಂಡು ದೂರ ಓಡಿಹೋಗೋಣ' ಎಂದು ಜೋರಾಗಿ ಕೂಗಿದ್ದೆ. ಐಸಿಯುವಿನಲ್ಲಿದ್ದ ಡಾಕ್ಟರುಗಳು, ನರ್ಸ್, ಪೇಷಂಟ್ ಗಳು ನನಗೆ ಹುಚ್ಚು ಹಿಡಿದಿರಬಹುದೆ ಎಂದು ಅಚ್ಚರಿಯಿಂದ ನೋಡುತ್ತಲಿದ್ದರು. ಚಂದ್ರಮ ಮಾತ್ರ ಈ ಯಾವ ವಿದ್ಯಮಾನಗಳ ಪರಿವೆಯೇ ಇಲ್ಲದೆ ಕಣ್ಮುಚ್ಚಿ ಮಲಗಿದ್ದಳು.

●

